# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 215 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 28.02.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 215 • PRGI No:KARKAN/2023/88055 • VIJAYANAGARA • 28.02.2025 • Friday • Page:04 • Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.



1,10,000+
Digital E-PAPER READERS

No.1 HAMPI TIMES LEADING PRINT & DIGITAL District News Paper

Contact for Advertisements: 9448633038



## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ



**Call Us for Advertisements**
Good Opportunity for Branding

**ಹಂಪಿ ಉತ್ಸವಕ್ಕೆ**
ನೀವೂ ಸ್ವಾಗತ ಕೋರಲು
ಬಯಸುತ್ತೀರಾ
ಇಂದೇ ಸಂಪರ್ಕಿಸಿ
M:9448633038

ಕೊನೆ ಕ್ಷಣದವರೆಗೆ ಕಾದು ನಿರಾಶರಾಗಬೇಡಿ!
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ


## ಹಂಪಿಗೆ ವಿಶೇಷ ಬಸ್ ವ್ಯವಸ್ಥೆ

**ಹಂಪಿ ಟೈಮ್ಸ್ ಹೊಸಪೇಟೆ**

ಫೆ.28 ರಿಂದ ಮಾರ್ಚ್ 2 ವರೆಗೆ ಹಂಪಿ ಉತ್ಸವ ನಿಮಿತ್ತ ಮೊದಲ ದಿನ ವಿಜಯನಗರ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರ ಹಾಗೂ ಬಳ್ಳಾರಿ ಜಿಲ್ಲೆಯ ಸಂಡೂರು ಪಟ್ಟಣದಿಂದ 198 ವಿಶೇಷ ಬಸ್ ವ್ಯವಸ್ಥೆ ಕಲ್ಪಿಸಲಾಗಿದೆ. ಉತ್ಸವ 3 ದಿನಗಳ ಕಾಲ ಹೊಸಪೇಟೆ ನಗರದಿಂದ ಹಂಪಿ ಸಾರ್ವಜನಿಕರಿಗೆ ಪ್ರತಿದಿನ 40 ವಿಶೇಷ ಉಚಿತ ಬಸ್ ಸೌಕರ್ಯ ಒದಗಿಸಲಾಗಿದೆ. ಈ ಬಸ್‌ಗಳು ಸಮಯಾನುಸಾರ ಕಾರ್ಯಚಾರಣೆ ನಡೆಸಲಿವೆ ಇದರ ಸದುಪಯೋಗ ಪಡೆದುಕೊಳ್ಳುವಂತೆ ಹೊಸಪೇಟೆ ಕ.ಕ.ರ.ಸಾ.ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಸಂತ ವೈಭವಕ್ಕೆ ಮೆರಗು ತಂದ ಗಜಲಕ್ಷ್ಮಿ

### ಅಂಬಾರಿಯಲ್ಲಿ ಶ್ರೀ ಭುವನೇಶ್ವರಿ ದೇವಿ | ನಾಡಿನ ಸಾಂಸ್ಕೃತಿಕ ವೈವಿಧ್ಯತೆಗೆ ಸಾಕ್ಷಿ | ಶಾಸಕ ಎಚ್.ಆರ್.ಗವಿಯಪ್ಪ ಚಾಲನೆ

### ಜನರ ಗಮನ ಸೆಳೆದ ಜಾನಪದ-ಸಾಂಸ್ಕೃತಿಕ ಕಲಾತಂಡಗಳು | ಶಾಸಕ, ಜಿಲ್ಲಾಧಿಕಾರಿಗೆ ಆಶೀರ್ವದಿಸಿದ ಗಜಲಕ್ಷ್ಮಿ



**ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿ ಉತ್ಸವ-2025ಕ್ಕೆ ಹೊಸಪೇಟೆ ನಗರಿ ಸಿಂಗಾರ ಗೊಂಡಿದ್ದು, ನಗರ ಸಂಪರ್ಕಿಸುವ ಪ್ರಮುಖ ರಸ್ತೆಗಳು ವಿದ್ಯುತ್ ದೀಪಾಲಂಕಾರದಿಂದ ಅಲಂಕೃತವಾಗಿವೆ. ಬೀದಿಗಳಿಗೆ ಅಳವಡಿಸಿರುವ ಬೆಳಕಿನ ತೋರಣ ಹಂಪಿ ಉತ್ಸವಕ್ಕೆ ಸರ್ವರನ್ನು ಸ್ವಾಗತಿಸುತ್ತಿದೆ.

ಹಂಪಿ ಉತ್ಸವ ಅಂಗವಾಗಿ ಹೊಸಪೇಟೆ ನಗರದಲ್ಲಿ ಗುರುವಾರ ಆಯೋಜಿಸಲಾಗಿದ್ದ ವಸಂತ ವೈಭವ ಕಲಾ ತಂಡಗಳ ಮೆರವಣಿಗೆ ನಾಡಿನ ಸಾಂಸ್ಕೃತಿಕ ವೈವಿಧ್ಯತೆಗೆ ಸಾಕ್ಷಿಯಾಯಿತು. ನಾಡಿನ ವಿವಿಧ ಸ್ಥಳ ಹಾಗೂ ನೆರೆ ರಾಜ್ಯಗಳಿಂದ ಆಗಮಿಸಿದ 125 ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡು ಉತ್ಸವದ ಮೆರಗು ಹೆಚ್ಚಿಸಿದವು.

ಇದೇ ಮೊದಲ ಬಾರಿಗೆ ಅಂಬಾರಿಯಲ್ಲಿ ತಾಯಿ ಭುವನೇಶ್ವರಿ ದೇವಿಯ ಮೂರ್ತಿ ಹೊತ್ತು ಆನೆ ಲಕ್ಷ್ಮೀ ಕಲಾತಂಡಗಳೊಂದಿಗೆ ಗಾಂಭೀರ್ಯದಿಂದ ಹೆಜ್ಜೆ ಹಾಕಿದ್ದು, ವಿಶೇಷವಾಗಿತ್ತು. ಹಂಪಿ ಉತ್ಸವದ ಕ್ಷಣಗಣನೆ ನಡುವೆ, ಗುರುವಾರ ಹೊಸಪೇಟೆ ನಗರದ ವಡಕರಾಯನ ದೇವಸ್ಥಾನದ ಬಳಿ, ವಸಂತ ವೈಭವ ಮೆರವಣಿಗೆಗೆ ವಿಜಯನಗರ ಶಾಸಕ ಎಚ್.ಆರ್. ಗವಿಯಪ್ಪ ಚಾಲನೆ ನೀಡಿದರು.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣ, ಸಹಾಯಕ ಆಯುಕ್ತ ವಿವೇಕ್, ತಹಶೀಲ್ದಾರ್ ಶೃತಿ ಎಂ ಗೌಡ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸಿದ್ದಲಿಂಗರಂಗಣ್ಣನವರ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಸಾರ್ವಜನಿಕರು ಮೆರವಣಿಗೆಗೆ ಸಾಕ್ಷಿಯಾದರು. ಬಳಿಕ ನಗರದ ಮೂರಂಗಡಿಯ ವೃತ್ತದ ಬಳಿ ಶಾಸಕರು, ಗಣ್ಯರು ಅಂಬಾರಿ ಹೊತ್ತ ಆನೆ ಲಕ್ಷ್ಮೀಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆಗೈದರು.

**ಗಮನ ಸೆಳೆದ ಜಾನಪದ ಹಾಗೂ ಸಾಂಸ್ಕೃತಿಕ ಕಲಾತಂಡಗಳು:** ವಸಂತ ವೈಭವ ಸಂಭ್ರಮದ ಮೆರವಣಿಗೆಯಲ್ಲಿ ನಾಡಿನ ವಿವಿಧ ಜಾನಪದ ಕಲಾ ಪ್ರಕಾರಗಳು ಹಾಗೂ ಹೊರ ರಾಜ್ಯದ ಕಲಾತಂಡಗಳು ನೋಡುಗರ ಗಮನ ಸೆಳೆದವು.

ಮೆರವಣಿಗೆಯಲ್ಲಿ ಮಹಿಳಾ ಜಾನಪದ ಕಲಾತಂಡ ಗಳು, ವೀರಗಾಸೆ, ನಗಾರಿ, ಡೋಲು, ಪೂಜಾ ಕುಣಿತ, ಪಟ ಕುಣಿತ, ಬಂಜಾರ ನೃತ್ಯ,ಚಂಡೆ ವಾದ್ಯ ಪ್ರದರ್ಶನ ನೀಡಲಿದ್ದಾರೆ. ಇದರೊಂದಿಗೆ ಕಂಸಾಳೆ, ಡೊಳ್ಳು, ಸೋಮನ ಕುಣಿತ, ಗಾರುಡಿಗೊಂಬೆ, ಬೇಡರ ವೇಷ, ಭರ್ಚಿ ವೇಷ, ಖಾಸಾ ಬೇಡರ ಪಡೆ, ನಂದಿ ಧ್ವಜ, ವೀರಗಾಸೆ, ಕಹಳೆ, ಚಾಮರ ಛತ್ರಿ, ಜಗ್ಗಹಲಗಿ,

>3












## ಸ್ಟುಡೆಂಟ್ ಕಾಲಂ

### ಜೀವನವನ್ನೇ ಬದಲಾಯಿಸಿದ ಗುರುಗಳು



ಒಂದು ಊರಿನಲ್ಲಿ ನಾಲ್ವರು ಗೆಳೆಯರಿದ್ದರು ಅವರು ದಿನಾಲು ಶಾಲೆಗೆ ಹೋಗುತ್ತಿದ್ದರು. ಅದರಲ್ಲಿ ಕೊಟ್ರೇಶ್ ಎಂಬ ಹುಡುಗನಿದ್ದ ಅವನು ಚೆನ್ನಾಗಿ ಓದುತ್ತಿದ್ದ ಆದರೆ ಅವನು ತುಂಬಾ ಬಡ ಹುಡುಗನಾಗಿದ್ದ ಅಗತ್ಯವಿರುವ ಪುಸ್ತಕಗಳನ್ನು ಕೊಂಡುಕೊಳ್ಳಲು ಆಗುತ್ತಿರಲಿಲ್ಲ ಶಾಲೆಯಲ್ಲಿ ಲೈಬ್ರರಿಯಿಂದ ಯಿಂದ ಪುಸ್ತಕಗಳನ್ನು ಪಡೆದು ಓದುತ್ತಿದ್ದ, ಒಂದು ದಿನ ಗೆಳೆಯರೆಲ್ಲರೂ ಪ್ರವಾಸ ಹೋಗಲು ನಿರ್ಧರಿಸಿದರು ಆದರೆ ಕೊಟ್ರೇಶ ನಾನು ಬರುವುದಿಲ್ಲ ಎಂದು ತಿಳಿಸಿದನು. ಕಾರಣ ಕೇಳಿದಾಗ ನನ್ನ ಬಳಿ ಹಣವಿಲ್ಲ ಎಂದನು ಆಗ ಸ್ನೇಹಿತರು ನೀನು ಹಣ ಕೊಡುವುದು ಬೇಡ ನಮ್ಮ ಜೊತೆ ಬಾ ಎಂದರು ಆಗ ಕೊಟ್ರೇಶ ಸ್ನೇಹಿತರ ಜೊತೆಗೆ ಪ್ರವಾಸಕ್ಕೆ ಹೋದನು ಇದುವರೆಗೂ ತನ್ನ ಜೀವನದಲ್ಲಿ ಎಂದು ಪ್ರವಾಸಕ್ಕೆ ಹೋಗಿರದ ಕೊಟ್ರೇಶಗೆ ಇದು ತುಂಬಾ ಮಜಾ ಎನಿಸಿತು ಜೊತೆಗೆ ಹೊರಗಿನ ಪ್ರಪಂಚದಲ್ಲಿ ತಾನು ಕಂಡ ಅನೇಕ ಅಂಶಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದನು ಅದರಲ್ಲಿ ಮುಖ್ಯವಾದ ಗುರುಗಳಿಗೆ ನಮಸ್ಕಾರ ಮಾಡುವು ದನ್ನು ರೂಡಿಸಿಕೊಂಡನು.

ಗುರುಗಳು ವಿದ್ಯಾರ್ಥಿಗಳಿಗೆ ನಿಮ್ಮ ಜೀವನದಲ್ಲಿ ಒಂದು ಗುರಿ ಇಟ್ಟುಕೊಳ್ಳಿರಿ ನಿಮ್ಮ ಪುಸ್ತಕಗಳನ್ನು ದಿನಾಲು ಓದಿಕೊಳ್ಳಿರಿ ಎಂದು ಹೇಳಿದರು. ಅದನ್ನು ಕೊಟ್ರೇಶ ಪಾಲಿಸಿದನು. ಗುರುಗಳು ಹೇಳಿದ ಮಾತನ್ನು ತಪ್ಪದೇ ಪಾಲಿಸುತ್ತಾನೆ. ಗುರುಗಳಿಂದ ಶಿಸ್ತನ್ನು ಸಮಯ ಪರಿಪಾಲನೆಯನ್ನು ಕಲಿತನು ಅದೇ ರೀತಿ ಹತ್ತನೇ ತರಗತಿಯಲ್ಲಿ ಪಾಸ್ ಆಗಿ ಮುಗಿದು ಕಾಲೇಜಿಗೆ ಹೋದನು ಅಲ್ಲಿ ಗುರುಗಳು ಹೇಳಿದ್ದನ್ನು ಪಾಲಿಸುತ್ತಿದ್ದನು ದಿನಾಲು ಕಾಲೇಜಿಗೆ ಹೋಗುತ್ತಿದ್ದನು ಗುರುಗಳಿಗೂ ಗೌರವ ಕೊಡುತ್ತಿದ್ದನು. ಡಿಗ್ರಿ ಮುಗಿಸಿ ನಂತರ ಕೊಟ್ರೇಶಗೆ ಒಂದು ಕಂಪನಿಯಲ್ಲಿ ಕೆಲಸಕ್ಕೆ ಅರ್ಜಿ ಹಾಕಿದನು. ಕೆಲಸಕ್ಕೆ ಇಬ್ಬರಿಗೂ ಇಂಟರ್‌ವ್ಯೂವ್ ಬಂದಿತ್ತು ಅಲ್ಲಿನ ಇಂಟರ್ ವ್ಯೂವ್ ಅಧಿಕಾರಿಗಳು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಇಬ್ಬರು ಸಮಾನಾಗಿ ಉತ್ತರಿಸಿದ್ದರು. ಅಧಿಕಾರಿಗಳಿಗೆ ಯಾರನ್ನು ಆಯ್ಕೆ ಮಾಡುವುದು ಎಂದು ಗೊಂದಲವಾಯಿತು. ನಂತರ ಒಂದು ತಿಳಿಯದಂತೆ ಅಂಗಿಯಲ್ಲಿ ಮೈಕ್ರೋ ಫೋನ್ ಫಿಕ್ಸ್ ಮಾಡಿದರು. ಒಂದೊಂದು ದಿಕ್ಕಿಗೆ ಹೋದರು ವಾಪಾಸು ಬರುವ ವೇಳೆಗೆ ಕೊಟ್ರೇಶ ಕೆಲಸಕ್ಕೆ ಆಯ್ಕೆಯಾಗಿದ್ದ. ಇಬ್ಬರಿಗೂ ಕ್ಯಾಮರ್ ಫಿಕ್ಸ್ ಮಾಡಿದ ಅಧಿಕಾರಿಗಳು ಅವರ ಚಲನವಲನಗಳನ್ನು ಗಮನಿಸುತ್ತಿದ್ದರು. ಕೊಟ್ರೇಶ ಪೇಟೆಯಲ್ಲಿ ಗುರುಗಳಿಗೆ ಗೌರವಿಸುತ್ತಿದ್ದನು ವಿನಯದಿಂದ ನಡೆದುಕೊಳ್ಳುತ್ತಿದ್ದನು. ಕಷ್ಟದಲ್ಲಿರುವವ ಸಹಾಯ ಮಾಡಿದನು. ಬಸ್ಸಿನಲ್ಲಿ ಗರ್ಭಿಣಿ ಹೆಣ್ಣು ಮಗಳಿಗೆ ಸೀಟು ಬಿಟ್ಟುಕೊಟ್ಟಳು. ವಯಸ್ಸಾದ ಅಜ್ಜನನ್ನು ಬಸ್ಸಿನಿಂದ ಕೆಳಗಿಳಿಸಿದನು. ಆದರೆ ಇನ್ನೊಬ್ಬನು ಯಾರನ್ನು ಮಾತನಾಡಿಸದೆ ತನ್ನ ಪಾಡಿಗೆ ತಾನು ಇದ್ದನು ಇದನ್ನು ಗಮನಿಸಿದ ಅಧಿಕಾರಿಗಳು ಕೊಟ್ರೇಶನನ್ನು ಕೆಲಸಕ್ಕೆ ಆಯ್ಕೆ ಮಾಡಿಕೊಂಡಿದ್ದರು ಒಂದು ಗುರುಗಳಿಗೆ ಗೌರವಿಸುವುದು ಪದ್ಧತಿ ಕೊಟ್ರೇಶ ನಲ್ಲಿ ಇತ್ತು ಜೀವನವನ್ನು ಬದಲಾಯಿಸಿತ್ತು ಆದ್ದರಿಂದ ಜೀವನದಲ್ಲಿ ಗುರಿ ಇರಬೇಕು ಮುಂದೆ ಗುರು ಇರಬೇಕು. ಗುರು ಬ್ರಹ್ಮ, ಗುರು ವಿಷ್ಣು ,ಗುರು ದೇವ ಮಹೇಶ್ವರ, ಗುರು ಸಾಕ್ಷಾತ್ ಪರಬ್ರಹ್ಮ ಎಂಬಂತೆ ದೇವರನ್ನು ಗುರುಗಳಲ್ಲಿ ಕಾಣಬೇಕು ಅವರ ಮಾರ್ಗದರ್ಶನದ ಲ್ಲಿಯೇ ನಡೆಯಬೇಕು

– ಎಸ್ ಕಾವೇರಿ, 9ನೇ ತರಗತಿ
ಸರ್ಕಾರಿ ಪ್ರೌಢಶಾಲೆ ಬ್ಯಾಸಿಗಿದೇರಿ

### ನಿಮ್ಮ ಮಕ್ಕಳು ಅರಸರಾಗಬೇಕೆ?

ಕನ್ನಡ ದಿನಪತ್ರಿಕೆ, ಪುಸ್ತಕಗಳನ್ನು ಮಕ್ಕಳ ಕೈಯಲ್ಲಿಡಿ.
ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

### ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

#### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

### ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಸಾಂಸ್ಕೃತಿಕ ರಾಜಧಾನಿ ಹಂಪಿ

ಕರ್ನಾಟಕದ ಮಹತ್ವಪೂರ್ಣ ಸಾಹಿತ್ಯಿಕ–ಸಾಂಸ್ಕೃತಿಕ ನೆಲೆಗಳಲ್ಲಿ ಅತ್ಯಂತ ಪ್ರಮುಖವಾದದ್ದು ಹಂಪಿ. ಇದು ಆದಿಮಾನವ ನೆಲೆ. ಧಾರ್ಮಿಕ–ಪೌರಾಣಿಕ ಸಾಂಸ್ಕೃತಿಕ ಪರಂಪರೆಯ ತವರು. ಶಿವಪ್ರಧಾನವಾದ ಪುಣ್ಯಕ್ಷೇತ್ರ. ಪಂಪಾಂಬಿಕೆ ಮತ್ತು ವಿರೂಪಾಕ್ಷ ಈ ನೆಲದ ದೈವಮೂಲಗಳು. ರಾಮಾಯಣ ಕಾಲದ ಕಿಷ್ಕಿಂದೆ, ರಾಮ–ಸುಗ್ರೀವರ ಸಖ್ಯ, ವಾಲಿವಧೆ. ಇಲ್ಲಿಂದಲೇ ಸೀತೆಯ ಅನ್ವೇಷಣೆ ಆರಂಭ ಎನ್ನುತ್ತದೆ ಪೌರಾಣಿಕ ಕಥೆ. ಹನುಮ ಜನಿಸಿದ ಅಂಜನಾದ್ರಿಯ ನೆಲ. ಕನ್ನಡದ ಸಾಹಿತ್ಯ–ಸಂಗೀತ, ಕಲೆ, ವಾಸ್ತುಶಿಲ್ಪ, ಜಾನಪದ, ಸಂಸ್ಕೃತಿ ಹಾಗೂ ರಾಜಕೀಯ ಪರಂಪರೆಗೆ ಹಂಪಿಯ ನೆಲದ ಕೊಡುಗೆ ಐತಿಹಾಸಿಕವಾದದ್ದು.

ಹಂಪಿಗೆ ವಿಜಯನಗರ ಸಾಮ್ರಾಜ್ಯದ ಪೂರ್ವ, ವಿಜಯನಗರ ಹಾಗೂ ನಂತರದ ಕಾಲಘಟ್ಟದ ಚಾರಿತ್ರಿಕ, ಸಾಹಿತ್ಯಿಕ–ಸಾಂಸ್ಕೃತಿಕವಾದ ಚರಿತ್ರೆ ಇದೆ. ಈ ನೆಲವನ್ನು ಪಂಪಾಕ್ಷೇತ್ರ, ಕರ್ನಾಟಕ ದೇಶ, ವಿಜಯನಗರಿ, ಬಿಜನಗರ, ವಿಜಯಕಲ್ಯಾಣ, ವಿಜಯನಗರ, ವಿದ್ಯಾನಗರ ಎಂಬ ಹೆಸರುಗಳಿಂದ ಕರೆಯಲ್ಪಟ್ಟಿದೆ. ಇಷ್ಟೇ ಅಲ್ಲ, ಕರ್ನಾಟಕ ದೇಶದ ಮಹಾರಾಜಧಾನಿ ವಿಜಯನಗರ ಎಂತಲೂ, ರಾಜಧಾನಿ ಹಂಪಿ ಎಂಬ ಉಲ್ಲೇಖವು ಶಾಸನಗಳಲ್ಲಿ ದಾಖಲಾಗಿದೆ. ಈ ನೆಲದ ಮತ್ತೊಂದು ಮಹತ್ವದ ವಿಷಯವೆಂದರೆ, ಒಂದೊಮ್ಮೆ ವಿಜಯನಗರ ಸಾಮ್ರಾಜ್ಯದ ಪರ್ಯಾಯ ನಾಮ ವಿರೂಪಾಕ್ಷವಾಗಿತ್ತು. ಇಲ್ಲಿ ಕಾವ್ಯವನ್ನೇ ಬರೆಯಲಿ, ರಾಜ್ಯವನ್ನೇ ಆಳಲಿ ಅದರ ಅಧಿಕಾರ ವಿರೂಪಾಕ್ಷನದ್ದೇ ಆಗಿತ್ತು. ಹೀಗಾಗಿಯೇ ಹಂಪಿಯ ಹರಿಹರ ಕವಿ ತನ್ನ ಹೆಸರನ್ನು ಕೈಬಿಟ್ಟು, ವಿರೂಪಾಕ್ಷನ ಹೆಸರಿನಲ್ಲಿ ರಗಳೆಗಳನ್ನು ಬರೆದ. ವಿರೂಪಾಕ್ಷನೇ ಕವಿ, ನಾನು ಅವನ ಲಿಪಿಕಾರನೆಂಬ ಭಾವ, ನಂಬಿಕೆಯನ್ನು ಹರಿಹರ ಹೊಂದಿದ್ದವನಾಗಿದ್ದ. ನಂತರ ವಿಜಯನಗರ ಸಾಮ್ರಾಜ್ಯದ ಸಂಗಮ ದೊರೆಗಳು, ತಮ್ಮ ಹೆಸರನ್ನು ಕೈಬಿಟ್ಟು ವಿರೂಪಾಕ್ಷನೇ ದೊರೆ, ನಾವು ಅವನ ಪ್ರತಿನಿಧಿಗಳೆಂದು ರಾಜ್ಯವನ್ನಾಳಿದವರು. ಹೀಗೆ ವಿರೂಪಾಕ್ಷ ದೇವರ ಹೆಸರಲ್ಲಿ ರಾಜ್ಯವನ್ನಾಳಿದ ಮತ್ತೊಂದು ಸಾಮ್ರಾಜ್ಯ ಚರಿತ್ರೆಯಲ್ಲಿ ಕಾಣಸಿಗುವುದಿಲ್ಲ ಎಂಬುದು ತಜ್ಞರ ಅಭಿಮತವಾಗಿದೆ.

ಹಂಪಿಯ ಪರಿಸರದಲ್ಲಿ ಕೇವಲ ಕನ್ನಡ ಸಾಹಿತ್ಯ ಅಷ್ಟೇ ರಚನೆಗೊಂಡಿಲ್ಲ. ಕನ್ನಡ ಸಾಹಿತ್ಯ, ಸಂಗೀತದ ಜೊತೆಗೆ ಸಂಸ್ಕೃತ, ತೆಲುಗು, ತಮಿಳು ಸಾಹಿತ್ಯವು ಸಹ ರಚನೆಗೊಂಡಿದೆ. ಈ ಸಾಹಿತ್ಯ ವಿಜಯನಗರದ ಕಾಲಘಟ್ಟಕ್ಕೆ ಮಾತ್ರ ಸೀಮಿತಗೊಂಡಿಲ್ಲ. ಕ್ರಿ.ಶ. 5–8ನೇ ಶತಮಾನದಲ್ಲೇ ಇಲ್ಲಿ ಸಂಸ್ಕೃತದ 'ಬೃಹದ್ದೇಶಿ' ರಚನೆಗೊಂಡಿತ್ತು ಎಂದರೆ ಆಶ್ಚರ್ಯವಾಗಬಹುದು. ಹೌದು, ಭರತನ ನಾಟ್ಯಶಾಸ್ತ್ರವನ್ನು ಬಿಟ್ಟರೆ, ಸಂಗೀತದಲ್ಲಿ ಬಹು ಪ್ರಾಚೀನವಾದ ಗ್ರಂಥ ಬೃಹದ್ದೇಶಿ. ಸಂಗೀತಶಾಸ್ತ್ರ ಪ್ರತಿಪಾದನೆಯ ದೃಷ್ಟಿಯಿಂದ ಇದು ಮಹತ್ವದ ಕೃತಿ. ಈ ಗ್ರಂಥ ರಚನೆಕಾರ ಮತಂಗ. ಈತ ಹಂಪಿಯ ನಿವಾಸಿ. ಹೀಗೆ ಮಾತಂಗನಿಂದ ಪ್ರಾರಂಭಗೊಂಡ ಸಾಹಿತ್ಯ ಚರಿತ್ರೆ ಹರಿಹರ, ರಾಘವಾಂಕ, ನಂಜುಂಡ ಕವಿ, ಹಂಪಿ ಪರಿಸರದ ನೂರೊಂದು ವಿರಕ್ತರು, ಶಿವಾನುಭವಿಗಳು ಹಾಗೂ ಪ್ರಭುಲಿಂಗಲೀಲೆ, ವೀರಶೈವಾಮೃತ ಪುರಾಣ, ಲಿಂಗಲೀಲಾವಿಲಾಸ ಚಾರಿತ್ರ್ಯ, ಶಿವತತ್ವ ಚಿಂತಾಮಣಿ ಮೊದಲಾದ ಕನ್ನಡದ ಮಹತ್ವದ ಕೃತಿಗಳು. ಶ್ರೀ ಕೃಷ್ಣದೇವರಾಯರ ಆಮುಕ್ತಮಾಲ್ಯದ ತೆಲುಗು ಕೃತಿ, ಜೈನಕವಿಯ ಚೂಡಾಮಣಿ, ಅಚ್ಚುತರಾಯಾಭ್ಯುದಯಂ, ಸಾಮ್ರಾಜ್ಯ ಲಕ್ಷ್ಮೀ ಪೀಠಿಕಾ, ಅಹೋಬಲ ಕವಿಯ ವಿರೂಪಾಕ್ಷಸ್ಥಾನಂ, ಗಂಗಾದೇವಿ ವಿರಚಿತ ಮಧುರಾವಿಜಯಂ, ಹೀಗೆ ಕನ್ನಡ, ಸಂಸ್ಕೃತ, ತೆಲುಗು, ಸಾಹಿತ್ಯದ ಕೃತಿಗಳು, ದಾಸರು ಹಾಗೂ ದಾಸಸಾಹಿತ್ಯ, ಕರ್ನಾಟಕ ಸಂಗೀತವನ್ನು ನಾಡಿಗೆಕೊಟ್ಟ ನೆಲ. ವಿಶ್ವ ಪ್ರಸಿದ್ಧ ಮೈಸೂರು ದಸರಾದ ಮೂಲ ಹಂಪಿ, ವಿಜಯನಗರವೇ ಆಗಿದೆ. ಇಷ್ಟೇ ಅಲ್ಲ ಕಲೆ, ಶಿಲ್ಪ, ವಾಸ್ತುಶಿಲ್ಪ, ದೇವಾಲಯಗಳು, ಸ್ಮಾರಕಗಳು, ಪುರಾತತ್ವ ಅವಶೇಷಗಳು, ಬಂಡೆಯ ಮೇಲಿನ ರೇಖಾಚಿತ್ರಗಳು, ವಿದೇಶಿ ಪ್ರವಾಸಿಗರ ದಿನಚರಿಗಳು ಹೀಗೆ ಕರ್ನಾಟಕದ ಸಂಸ್ಕೃತಿಯ ಭವ್ಯಪರಂಪರೆಯು,ಈಗಲೂಜೀವಂತವಾಗಿರುವ,ವಿಶ್ವಪರಂಪರೆಯ ಪಟ್ಟಿಗೆ ಸೇರ್ಪಡೆಗೊಂಡು ವಿಶ್ವದ ಗಮನ ಸೆಳೆದಿರುವ ಹಂಪಿ.

1336ರಲ್ಲಿ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯವು ಕನ್ನಡಿಗರ ಸಾಮ್ರಾಜ್ಯವೆಂದು ಗುರುತಿಸಲ್ಪಟ್ಟಿದೆ. ಸಂಗಮ ವಂಶದ ರಾಜರು ಅಧಿದೈವ 'ವಿರೂಪಾಕ್ಷ'ನ ಹೆಸರಿನಲ್ಲಿ ರಾಜ್ಯಭಾರವನ್ನು ಮಾಡಿ 'ವಿರೂಪಾಕ್ಷ' ಎಂಬ ಕನ್ನಡದ ಅಂಕಿತದಲ್ಲಿ ಆಡಳಿತ ನಡೆಸಿದ ಕನ್ನಡಿಗರ ಸಾಮ್ರಾಜ್ಯ. ಸಾಹಿತ್ಯ, ಸಂಗೀತ, ಶಿಲ್ಪ, ನೃತ್ಯ, ಚಿತ್ರ ಮೊದಲಾದ ಲಲಿತಕಲೆಗಳಿಗೆ ರಾಜಾಶ್ರಯವನ್ನು ನೀಡಿದ್ದವರು. ಭಾರತದ ಇತಿಹಾಸದಲ್ಲಿ ಗುಪ್ತರ ಕಾಲವೊಂದನ್ನು ಬಿಟ್ಟರೆ, ವಿಜಯನಗರ ಸಾಮ್ರಾಜ್ಯದ ಅವಧಿಯಲ್ಲಿ ನಡೆದಷ್ಟು ಸಾಹಿತ್ಯಿಕ ಚಟುವಟಿಕೆಗಳು, ಬೇರೆ ಯಾವ ರಾಜರ ಕಾಲದಲ್ಲಿಯು ನಡೆಯಲಿಲ್ಲ ಎನ್ನುವುದು, ವಿದ್ವಾಂಸರು ಅಭಿಪ್ರಾಯವಾಗಿದೆ. ಹಂಪಿಯ ನೆಲದ ಸಾಹಿತ್ಯಕ್ಕೆ 'ದೇಶಿ' ಪ್ರಜ್ಞೆಯ ಚಾರಿತ್ರಿಕತೆ ಇದೆ. ರಗಳೆ, ಛಂದಸ್ಸು, ಷಟ್ಪದಿ ಎಂಬ ದೇಶಿ ಪರಂಪರೆಯನ್ನು ಕೊಟ್ಟ ಹರಿಹರ, ರಾಘವಾಂಕರು ಹಂಪಿ ನೆಲದವರು. ವಸ್ತು, ಭಾಷೆ, ಶೈಲಿ, ತಂತ್ರ ಮತ್ತು ಕಥಾವಸ್ತು, ದೃಷ್ಟಿಯಿಂದ ಕನ್ನಡ ಸಾಹಿತ್ಯಕ್ಕೆ ಹೊಸ ದಾರಿಯನ್ನು ತೋರಿದ್ದಾರೆ. ಈ ಕಾರಣದಿಂದ ಹರಿಹರನನ್ನು ಹೊಸ ಯುಗದ ಹರಿಕಾರ ಎಂದಿದ್ದಾರೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ
ಮೊ: 9449654489
Scan For Digital Colourful
HAMPI TIMES E-paper

ಹರಿಹರನ ನೂರು ರಗಳೆಗಳು, ಶಿವಶರಣರ ರಗಳೆಗಳು, ಶಿವಭಕ್ತರ ರಗಳೆಗಳು, ಸಂಕೀರ್ಣ ರಗಳೆಗಳು, ಚಂಪೂ ಕಾವ್ಯ, ಶತಕ ಸಾಹಿತ್ಯ, ಗದ್ಯ ಹಾಗೂ ರಾಘವಾಂಕನ ಹರಿಶ್ಚಂದ್ರ ಕಾವ್ಯ, ಸೋಮನಾಥ ಚರಿತ್ರೆ, ಸಿದ್ಧರಾಮ ಚರಿತ್ರೆ, ವೀರೇಶ ಚರಿತ್ರೆ, ಶರಭ ಚರಿತ್ರೆ ನಂಜುಂಡ ಕವಿಯ ಪಂಪಾಪುರ ವರ್ಣನೆ ಕಾವ್ಯ ಮೊದಲಾದವುಗಳಿಂದ ಕನ್ನಡ ಸಾಹಿತ್ಯಕ್ಕೆ ಹೊಸ ಪರಂಪರೆಯನ್ನು ಕೊಟ್ಟವರು.

ಪ್ರೌಢದೇವರಾಯನ ಕಾಲ ಸಮಾಜೋ–ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಹನ್ನೆರಡನೆಯ ಶತಮಾನದ ಕ್ರಾಂತಿಯ ನಂತರ ಅಳಿದುಳಿದ ವಚನ ಸಾಹಿತ್ಯವನ್ನು ಸಂರಕ್ಷಿಸುವ ಸಂಬಂಧ ನೂರೊಂದು ವಿರಕ್ತರು ಹಂಪಿಗೆ ಬಂದವರು. ಇವರು ವಚನ ಸಾಹಿತ್ಯದ ಸಂರಕ್ಷಣೆ, ಸಂಗ್ರಹ, ವ್ಯಾಖ್ಯಾನ ಟೀಕುಗಳ ಕಾರ್ಯವನ್ನು ಮಾಡಿದವರು. ಕಲ್ಯಾಣದ ನಂತರ ಹಂಪಿಯಲ್ಲಿ ವಚನ ಸಾಹಿತ್ಯದ ಸಂರಕ್ಷಣೆ ಮತ್ತು ಪುನರುತ್ಥಾನದ ಕಾರ್ಯ ನಡೆಯಿತು. ಪ್ರೌಢದೇವರಾಯ ಸಂಸ್ಕೃತದಲ್ಲಿ ಸುಧಾನಿಧಿ, ಬ್ರಹ್ಮಸೂತ್ರವೃತ್ತಿ ಕೃತಿಗಳನ್ನು ರಚಿಸಿದ್ದ.





ಲಿಂಗಲೀಲಾವಿಲಾಸ ಚಾರಿತ್ರ, ಪ್ರಭುದೇವರ ಮಂತ್ರಗೋಪ್ಯದ ಟೀಕೆ ಬರೆದ ಕಲ್ಲುಮಠದ ಪ್ರಭುದೇವ, ಏಕೋತ್ತರ ಶತಸ್ಥಲ, ಪ್ರಭುದೇವರ ಷಟ್‌ಸ್ಥಲ ವಚನ ವ್ಯಾಖ್ಯಾನ ಬರೆದ ಮಹಾಲಿಂಗದೇವ. ನೂರೊಂದು ಸ್ಥಲ ಅಥವಾ ಸ್ವರವಚನಗಳ ಪಾರಿಭಾಷಿಕ ಪದಕೋಶ ಬರೆದ ಕುಮಾರ ಬಂಕನಾಥ. ಮಗ್ಗಿಯ ಮಾಯಿದೇವ ಬರೆದ ಅನುಭವ ಸೂತ್ರ, ಪ್ರಭುಗೀತೆ, ಏಕೋತ್ತರ ಶತಸ್ಥಲ ಷಟ್ಪದಿ, ಶತಕತ್ರಯ, ಮಗ್ಗೆಯ ಮಾಯಿದೇವನ ವಚನ. ಕರಸ್ಥಲಗಳ ವೀರಣ್ಣೊಡೆಯರ ವಚನ, ಕರಸ್ಥಲ ವೀರಣ್ಣೊಡೆಯರ ಕಂದ, ಇಷ್ಟಲಿಂಗ ಚರಿತೆ, ಲಿಂಗಸೂತ್ರದ ವಚನ, ಕರಸ್ಥಲನಾಗಿದೇವ ತ್ರಿವಿಧಿ, ಅಕ್ಷರದ ಚೌಪದ, ಏಕವಿಂಶತಿ ದೀಕ್ಷಾ ವಿಧಾನ, ಮಡಿವಾಳಯ್ಯನ ತಾರಾವಳಿ. ವಚನಗಳು, ಹಾಡುಗಳು, ಶಿವಯೋಗಾಂಗ ಭೂಷಣ, ಸದ್ಗುರು ರಹಸ್ಯ, ಕಲ್ಯಾಣೇಶ್ವರ, ಸ್ವರೂಪಾಮೃತ, ವೃಷಭಗೀತೆ, ಅವಧೂತ ಗೀತೆ, ಮನೋವಿಜಯ ಕಾವ್ಯ, ಬತ್ತಲೇಶ್ವರನ ಹಾಡುಗಳು, ಮೊದಲಾದ ಧಾರ್ಮಿಕ ಗ್ರಂಥಗಳನ್ನು ರಚಿಸಿದವರು ನೂರೊಂದು ವಿರಕ್ತರು. ಇವರೆಲ್ಲರು ಹಂಪಿಯ ನೆಲದಲ್ಲಿ ಇದ್ದವರು ಎನ್ನುವುದು ಅತ್ಯಂತ ಗಮನಾರ್ಹವಾದ ಸಂಗತಿಯಾಗಿದೆ.

ನೂರೊಂದು ವಿರಕ್ತರೆಲ್ಲದೆ, ಪ್ರಭುಲಿಂಗಲೀಲೆಯ ಚಾಮರಸ ಕವಿ, ವಿರೂಪಾಕ್ಷಾಸ್ಥಾನ, ಗುರುಮೂರ್ತಿ ಶಂಕರ ಶತಕಗಳ ಚಂದ್ರಶೇಖರ ಕವಿ, ಕ್ರಿಯಾಶಕ್ತ್ಯಯ್ಯ, ಪರಂಜ್ಯೋತಿಯತಿ, ಶಾಂತಯ್ಯ, ನಿರ್ವಾಣಿ ಬೋಳೇಶ, ಗುರುಬಸವಾರ್ಯ, ಕರಸ್ಥಲದ ಮಲ್ಲಿಕಾರ್ಜುನೊಡಯ, ಕಲ್ಲಿನಾಥ, ಸಾಳ್ವಗೋಪ ತಿಪ್ಪ, ಕಲ್ಲರಸ ಪರ್ವತ ದೇವ ಮೊದಲಾದವರು ಸಹ ಹಂಪಿಯ ನೆಲದಲ್ಲಿ ಸಾಹಿತ್ಯ ರಚನೆ ಮಾಡಿದ್ದವರು. ಈ ಕವಿಗಳು, ವಿರಕ್ತರನ್ನು ನೋಡಿದಾಗ, ವಿಜಯನಗರದ ಪ್ರೌಢದೇವರಾಯನ ಕಾಲವನ್ನು 'ನೂರೊಂದು ವಿರಕ್ತರ ಕಾಲ', ವೀರಶೈವ ಸಮುದ್ಧಾರಣಯುಗ ವೀರಶೈವ ಧಾರ್ಮಿಕ, ಸಾಹಿತ್ಯಿಕ ಪುನರುತ್ಥಾನಯುಗ ಎಂದು ಕರೆಯಲಾಗಿದೆ. ಈ ಕೃತಿಗಳ ಜೊತೆಗೆ ಪ್ರಮುಖವಾಗಿ ವಚನ ಸಂಕಲನ ಗ್ರಂಥಗಳು, ಟೀಕು ಮತ್ತು ವ್ಯಾಖ್ಯಾನ ಗ್ರಂಥಗಳು, ಮೊದಲ ಶೂನ್ಯ ಸಂಪಾದನೆ, ಎರಡನೇ ಶೂನ್ಯ ಸಂಪಾದನೆಯ ಸಂಕಲನ ಗ್ರಂಥಗಳು, ಸ್ವತಂತ್ರ ವಚನಗಳು, ಸ್ವರವಚನಗಳು, ತತ್ವಪ್ರತಿಪಾದನ ಗ್ರಂಥಗಳು, ಭೀಮಕವಿಯ ಬಸವಪುರಾಣ, ಚಾಮರಸನ ಪ್ರಭುಲಿಂಗಲೀಲೆ, ಲಕ್ಕಣ ದಂಡೇಶನ ಶಿವತತ್ವ ಚಿಂತಾಮಣಿ ಪುರಾಣ ಮತ್ತು ಕಾವ್ಯಗಳು ಪ್ರಮುಖ ಗ್ರಂಥಗಳಾಗಿವೆ. ಭಕ್ತಿ, ಜ್ಞಾನ, ವೈರಾಗ್ಯ ಪ್ರತಿಪಾದನೆಗಾಗಿ ಮಗ್ಗೆಯ ಮಾಯಿದೇವ–ಶಿವಾಧವ ಶತಕ, ಶಿವ ವಲ್ಲಭ ಶತಕ. ಐಪುರೀಶ್ವರ ಶತಕ, ನಿಃಕಲಶತಕ, ಶಾಂತ ಶತಕ ಮೊದಲಾದವುಗಳು. ಇನ್ನೂ ಕಾಲಜ್ಞಾನದ ಪದಗಳು, ಸಂಕೀರ್ಣ ಸಾಹಿತ್ಯವಾದ ತಾರವಳಿ, ನಾಂದ್ಯ ರಗಳೆ, ತ್ರಿಪದಿ, ಮಂತ್ರಗೋಪ್ಯ, ಸ್ತೋತ್ರ, ಚೌಪದಿ ಇತ್ಯಾದಿ ಪ್ರಕಾರಗಳಲ್ಲಿಯು ಸಾಹಿತ್ಯಿ ರಚನೆಗೊಂಡಿದೆ. ಕವಿಗಳು, ಶರಣರು ಕನ್ನಡ ಸಾಹಿತ್ಯವನ್ನು ರಚಿಸಿ, ಕನ್ನಡ ಸಾಹಿತ್ಯ ಪರಂಪರೆಗೆ ಅಪಾರವಾದ ಕೊಡುಗೆಯನ್ನು ಕೊಟ್ಟಿರುವುದನ್ನು ವಿದ್ವಾಂಸರು ಗುರುತಿಸಿ, ಪ್ರೌಢದೇವರಾಯನ ಕಾಲವನ್ನು ಕನ್ನಡ ಸಾಹಿತ್ಯದ ಸುವರ್ಣ ಕಾಲಘಟ್ಟ, ವೀರಶೈವ ಧರ್ಮದ ಪುನರುಜ್ಜೀವನದ ಕಾಲವೆಂದು ಗುರುತಿಸಿದ್ದಾರೆ. ಸಂಗಮ ವಂಶದ ರಾಜರು ತಮ್ಮ ಸಾಮ್ರಾಜ್ಯದಲ್ಲಿ ಸಾಹಿತ್ಯ, ಲಲಿತ ಕಲೆಗಳನ್ನು ಪೋಷಿಸುತ್ತ, ಕವಿ–ಕಲಾವಿದರಿಗೆ ಅಗ್ರಹಾರಗಳನ್ನು, ಪಂಡಿತರಿಗೆ ಕನಾಕಾಭಿಷೇಕವನ್ನು ಮಾಡುತ್ತ ಸಾಹಿತ್ಯವನ್ನು ಪೋಷಿಸಿದ್ದಾರೆ.

ನಂತರ ಕೃಷ್ಣದೇವರಾಯನ ಕಾಲ 1509 ರಿಂದ 1530ರವರೆಗೆ ಸಾಹಿತ್ಯಕ್ಕೆ ಅಪಾರವಾದ ಪ್ರೋತ್ಸಾಹ ದೊರೆಯಿತು. ಸ್ವತಃ ಕೃಷ್ಣದೇವರಾಯನೆ ಕವಿತೆ, ಸಾಹಿತ್ಯವನ್ನು ರಚನೆ ಮಾಡಿ, ಕವಿ, ಪಂಡಿತರಿಗೆ ರಾಜಾಶ್ರಯವನ್ನು ನೀಡಿದ್ದಾನೆ. ಆಸ್ಥಾನದ ಅಷ್ಟದಿಗ್ಗಜರುಗಳಾದ ಅಲ್ಲಾಸಾನಿ ಪೆದ್ದನ್ನ, ನಂದಿ ತಿಮ್ಮಣ್ಣ, ತೆನಾಲಿ ರಾಮಕೃಷ್ಣ ಮೊದಲಾದವರು ಪ್ರಸಿದ್ಧಿ ಪಡೆದಿದ್ದಿವರು. ಇಷ್ಟೇ ಅಲ್ಲದೆ, ಕನ್ನಡ, ತೆಲುಗು, ಸಂಸ್ಕೃತ ಕವಿಗಳು ಕೃತಿಗಳನ್ನು ರಚಿಸಿದ್ದಾರೆ. ಕೃಷ್ಣದೇವರಾಯರೇ ಬರೆದ 'ಆಮುಕ್ತಮೌಲ್ಯದ' ಗ್ರಂಥ ಅತ್ಯಂತ ಪ್ರಸಿದ್ಧಿ ಪಡೆದುಕೊಂಡಿದೆ. ಅಲ್ಲಸಾನಿ ಪೆದ್ದನನ 'ಮನುಚರಿತ್ರೆ'. ತೆನಾಲಿ ರಾಮಕೃಷ್ಣನ ಪಾಂಡುರಂಗ ಮಹಾತ್ಮ, ನಂದಿ ತಿಮ್ಮಣ್ಣನ ಪಾರಿಜಾತಾ ಪಹರಣ, ಧೂರ್ಜಟ ಕವಿಯ 'ಕಾಳಹಸ್ತಿ ಮಹಾತ್ಮ' ಗ್ರಂಥ ಮೊದಲಾದವುಗಳು.

ದಾಸಸಾಹಿತ್ಯದ ಯತಿಗಳು, ಪಂಡಿತರಾಗಿದ್ದ ಶ್ರೀ ವ್ಯಾಸರಾಯರು ಹಂಪಿಯಲ್ಲಿದ್ದು ದಾಸ ಸಾಹಿತ್ಯಕ್ಕೆ ಅಮೂಲ್ಯವಾದ ಕೊಡುಗೆಯನ್ನು ನೀಡಿ ದಾಸಸಾಹಿತ್ಯವನ್ನು ಶ್ರೀಮತಗೊಳಿಸಿದ್ದವರು. ಶೈವ, ವೀರಶೈವ, ವೈಷ್ಣವ ಪಂಥದ ಅನೇಕ ಕವಿಗಳಿದ್ದರು. ಕೃಷ್ಣದೇವರಾಯನ ಆಸ್ಥಾನದಲ್ಲಿದ್ದ 'ಕುಮಾರ ಸರಸ್ವತಿ' ಎಂಬ ಕವಿ ತಮಿಳಿನಲ್ಲಿ ಶ್ಲೋಕಗಳನ್ನು ರಚಿಸಿದ್ದಾನೆ. ಮಂಡಲ ಪುರುಷನೆಂಬ ಜೈನ ಕವಿಯೊಬ್ಬ 'ಚೂಡಾಮಣಿ' ಎಂಬ ದ್ರಾವಿಡ ನಿಘಂಟನ್ನು ಸಂಕಲಿಸಿದ್ದಾನೆ. ಜ್ಞಾನ ಪ್ರಕಾಶ ಎಂಬ ತಮಿಳು ಕವಿ ಮಂಜರಿಪ್ಪಾ ಎಂಬ ದ್ರಾವಿಡ ಕಾವ್ಯವನ್ನು ರಚಿಸಿದ. ರಾಮಾಯಣ ಹಾಗೂ ಇತರೆ ಮಹಾಕಾವ್ಯಗಳು ಕೃಷ್ಣದೇವರಾಯನ ಆಸ್ಥಾನದ ಕವಿಗಳಿಂದ ರಚಿತವಾಗಿ ಸಾಹಿತ್ಯಕ್ಕೆ ಸುವರ್ಣಯುಗವೆನಿಸಿದ ಕಾಲ. ಇಷ್ಟೇ ಅಲ್ಲ ಸ್ವತಃ ಕವಿಯಾಗಿದ್ದ ಕೃಷ್ಣದೇವರಾಯ ಸಂಸ್ಕೃತದಲ್ಲಿ ಅನೇಕ ಕಾವ್ಯಗಳನ್ನು ರಚಿಸಿದ್ದಲ್ಲದೆ ತೆಲುಗಿನಲ್ಲಿ 'ಆಮುಕ್ತಮಾಲ್ಯದ' ಎಂಬ ಗ್ರಂಥ ಬರೆದಿದ್ದು ಒಂದು ಮಹತ್ವದ ಕಾರ್ಯವಾಗಿದೆ.

ಪದ್ಯ ಸಾಹಿತ್ಯದಲ್ಲಿ ಛಂದೋಲಯವೇ ಕೇಳಿಸಲು ಪ್ರಾರಂಭಿಸಿದ ಸಂದರ್ಭದಲ್ಲಿ, ಮತ್ತೇ ದೇಶಿಯ ಸಂಗೀತ, ಕರ್ನಾಟಕ ಸಂಗೀತಕ್ಕೆ ಸ್ಪರ್ಶ ಕೊಟ್ಟವರು ದಾಸರು. ಹಂಪಿಯಲ್ಲಿದ್ದ ವ್ಯಾಸರಾಯರು ಹಲವು ಕೀರ್ತನೆಗಳನ್ನು ರಚಿಸಿದ್ದಾರೆ. ಇಷ್ಟೇ ಅಲ್ಲ ವಿಜಯನಗರದಲ್ಲಿ ವಿದ್ಯಾಪೀಠವನ್ನು ಸ್ಥಾಪಿಸಿ, ಸಾಹಿತ್ಯಿಕ ಚರ್ಚೆಗಳನ್ನು ಸಹ ನಡೆಸಿದ್ದವರು. ಪುರಂದಾಸರು, ಕನಕದಾಸರು ಹಂಪಿಯಲ್ಲಿಯೇ ಇದ್ದು ಹಲವಾರು ಕೀರ್ತನೆಗಳನ್ನು ರಚಿಸಿದವರು. ಕರ್ನಾಟಕ ಸಂಗೀತವನ್ನು ದೇಶಿ ಪರಂಪರೆಯನ್ನು ಕೊಟ್ಟಿದ್ದು ಸಹ ಈ ಹಂಪಿ ನೆಲ. ದಾಸಸಾಹಿತ್ಯಕ್ಕೆ ಅಪೂರ್ಣ ಹಾಗೂ ಅಮೂಲ್ಯ ಸಾಹಿತ್ಯವನ್ನಿತ್ತು ಕನ್ನಡ ಸಾಹಿತ್ಯವನ್ನು ಶ್ರೀಮಂತವಾಗಿಸಿದವರು ಪುರಂದರದಾಸರೂ ಕನಕದಾಸರು. ಹೀಗೆ ಹಂಪಿಯ ನೆಲ ಸಾಹಿತ್ಯ–ಸಂಸ್ಕೃತಿಗೆ ಮಹತ್ವದ ಕೊಡುಗೆಯನ್ನು ನೀಡಿದೆ.

ಸಂಸ್ಕೃತ ಸಾಹಿತ್ಯ ಪರಂಪರೆಯನ್ನು ಗಮನಿಸಿದರೆ, ಸಾಯಣ ಮತ್ತು ವಿದ್ಯಾರಣ್ಯರುಗಳ ಪರಂಪರೆಯೇ ಇದೆ. ವಿದ್ಯಾರಣ್ಯರ ಪ್ರದೇಶದ ಮಾಧವೀಯಂ, ವೇದಾಂತ ಪಂಚದಶಿ, ಸಂಗೀತ ಸಾರ ಮೊದಲಾದವುಗಳಾಗಿವೆ. ವಿಜಯನಗರದ ವೀರಕಂಪಣನ ಹೆಂಡತಿ ಗಂಗಾದೇವಿ ವಿರಚಿತ 'ಮಧುರಾ ವಿಜಯಂ', ಸಂಸ್ಕೃತದಲ್ಲಿ ಕಾವ್ಯ ರಚನೆ ಮಾಡಿದ ಮೊದಲ ಕನ್ನಡತಿ ಗಂಗಾದೇವಿ ಎಂಬ ಹೆಗ್ಗಳಿಕೆ. ಮತ್ತೊಂದು ಮಹತ್ವದ ಕೃತಿ ಅಚ್ಯುತರಾಯಾಭ್ಯುದಯಂ. ಇದನ್ನು ರಾಜನಾಥ ಡಿಂಡಮ ರಚಿಸಿದ್ದಾನೆ. ಇವನು ಅಚ್ಯುತರಾಯನ ಆಸ್ಥಾನದ ಕವಿ. ಹೀಗೆ ವಿಜಯನಗರ ಸಾಮ್ರಾಜ್ಯದ ಹಂಪಿಯ ನೆಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು ಸಾಹಿತ್ಯದ ನೂರಾರು ಕೃತಿಗಳು ರಚಿಸಲ್ಪಟ್ಟಿವೆ. ಇಷ್ಟೇ ಅಲ್ಲ ಹಂಪಿಯಲ್ಲಿಯೇ 500 ಹೆಚ್ಚು ಶಾಸನಗಳು ಹಾಗೂ ರಾಜ್ಯ, ಹೊರ ರಾಜ್ಯದಲ್ಲಿ ಐದು ಸಾವಿರಕ್ಕೂ ಹೆಚ್ಚು ವಿಜಯನಗರಕ್ಕೆ ಸಂಬಂಧಿಸಿದ ಶಾಸನಗಳು ದೊರಕಿರುವುದು ಸಹ ವಿಜಯನಗರ ಸಾಮ್ರಾಜ್ಯಕ್ಕೇ ಹೊರತು ಮತ್ತ್ಯಾವುದೇ ಸಾಮ್ರಾಜ್ಯಕ್ಕೆ ಈ ಸಾಂಸ್ಕೃತಿಕ ಚರಿತ್ರೆ ಇಲ್ಲ. ಹೀಗಾಗಿ ಹಂಪಿಯ ಸಾಂಸ್ಕೃತಿಕ ಹಿರಿಯನ್ನು ಹೆಚ್ಚಿಸುತ್ತದೆ. ವಿಜಯನಗರದ ಹಿರಿಮೆ ದಕ್ಷಿಣ ಮತ್ತು ಉತ್ತರ ಭಾರತಕ್ಕೂ ವಿಸ್ತರಿಸಿಕೊಂಡಿತ್ತು. ಹಂಪಿ ರಾಜಕೀಯ, ಸಾಂಸ್ಕೃತಿಕ ಚಟುವಟಿಕೆಗಳ ಆಗರವಾಗಿತ್ತು. ಸಾಂಸ್ಕೃತಿಕ ವರ್ಣಗೋಲದ ಕೇಂದ್ರಬಿಂದುವಾಗಿತ್ತು.

ಹಂಪಿಯಲ್ಲಿ ವಿಜಯನಗರ ಪೂರ್ವ, ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಹಾಗೂ ವಿಜಯನಗರ ಸಾಮ್ರಾಜ್ಯದ ನಂತರವೂ ಕನ್ನಡ ಸಾಹಿತ್ಯ ಬೆಳದುಬಂದಿದೆ. ಹರಿಹರ ಕವಿಯು ಕ್ರಿ.ಶ. 1200–1250ರ ಅವಧಿಯಲ್ಲಿನ ಪಂಪಾಕ್ಷೇತ್ರ ರಗಳೆ, ಕ್ರಿ.ಶ. 1430ರ ಚಂದ್ರಶೇಖರ ಕವಿಯ ವಿರೂಪಾಕ್ಷಾಸ್ಥಾನಂ, ಕ್ರಿ.ಶ. 1613ರಲ್ಲಿ ಅಹೋಬಲ ಕವಿಯ ವಿರೂಪಾಕ್ಷ ವಸಂತೋತ್ಸವ ಈ ಮೂರು ಕೃತಿಗಳು ವಿವಿಧ ಕಾಲಘಟ್ಟದಲ್ಲಿ ರಚನೆಗೊಂಡು ಹಂಪಿಯ ಹಾಗೂ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಆಧುನಿಕ ಚರಿತ್ರೆಯಲ್ಲಿ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯು ಸಹ ಮಹತ್ವದ ಘಟನೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಅಧ್ಯಯನ, ಸಂಶೋಧನೆ, ಪ್ರಕಟಣೆ ಕಾರ್ಯವನ್ನು ನಿರ್ವಹಿಸುತ್ತಿದೆ. ಅಂದು ರಾಜಮಹಾಜರದ ಕಾಲದಲ್ಲಿ ಸಾಹಿತ್ಯ ಬೆಳೆದು ಬಂದರೆ, ಇಂದು ಕನ್ನಡ ವಿಶ್ವವಿದ್ಯಾಲಯದ ಮೂಲಕ ಮತ್ತೇ ಸಾಹಿತ್ಯ ಪುನರ್‌ಜ್ಜೀವನ ಕಾಣುತ್ತಿದೆ. ವಿಶ್ವವಿದ್ಯಾಲಯ ಸಾವಿರದ ಐದು ನೂರಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದೆ. ಹೀಗೆ ಹಂಪಿಯ ಈ ನೆಲದಲ್ಲಿ ಕ್ರಿ.ಶ. 5–8ನೇ ಶತಮಾನದಿಂದ ನಮ್ಮ ಕಾಲಘಟ್ಟದವರೆಗೂ ಸಾಹಿತ್ಯದ ಪರಂಪರೆ ಬೆಳೆದುಬಂದಿದೆ. ಇಷ್ಟೇ ಅಲ್ಲ ಹಂಪಿಯು ವಿಶ್ವಪರಂಪರೆಯ ತಾಣವಾಗಿಯು ಗುರುತಿಸಿಕೊಂಡು ವಿಶ್ವದ ಗಮನಸೆಳೆದಿದೆ. ಹಂಪಿ ನೆಲದ ಸಮಗ್ರ ಸಾಹಿತ್ಯ, ಸಾಹಿತ್ಯದ ಕೃತಿಗಳನ್ನು, ಕವಿಗಳನ್ನು ಕುರಿತು ಇಲ್ಲಿ ಸಂಪೂರ್ಣವಾಗಿ ದಾಖಲಿಸಲು ಸಾಧ್ಯವಾಗಿಲ್ಲ. ಒಟ್ಟಾರೆ ಹಂಪಿಯ ಸಾಹಿತ್ಯಿಕ, ಸಾಂಸ್ಕೃತಿಕ ಚರಿತ್ರೆಯನ್ನು ಗಮನಿಸಿದರೆ, ವಿಜಯನಗರ ಸಾಮ್ರಾಜ್ಯದಲ್ಲಿ ಸಾಹಿತ್ಯಕ್ಕೆ ಸಿಕ್ಕಷ್ಟು ಪ್ರೋತ್ಸಾಹ ಯಾವ ಸಾಮ್ರಾಜ್ಯದಲ್ಲಿಯು ಸಿಕ್ಕಿಲ್ಲ. ಕನ್ನಡ, ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಗ್ರಂಥಗಳು ರಚಿತವಾಗಿ, ತ್ರಿಭಾಷೆಗಳ ಸಾಹಿತ್ಯ ವಿಜಯನಗರದಲ್ಲಿ ಉತ್ತುಂಗವಾಗಿ ಬೆಳೆದು ಪ್ರೌಢದೇವರಾಯ ಹಾಗೂ ಕೃಷ್ಣದೇವರಾಯರ ಆಡಳಿತದಲ್ಲಿ ಕನ್ನಡ–ತೆಲುಗು ಸಾಹಿತ್ಯದ ಸುವರ್ಣಯುಗವೆನಿಸಿದೆ. ಹಂಪಿಯ ನೆಲದಲ್ಲಿ ಕನ್ನಡ ವಾಙ್ಮಯ ಸಮೃದ್ಧವಾಗಿ ಬೆಳೆದುಬಂದಿದೆ. ನಿಜ ಅರ್ಥದಲ್ಲಿ ಈ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ ರಾಜಧಾನಿ ಹಂಪಿಯೇ ಆಗಿದೆ. ಆಕರ : ವಿವಿಧ ಸಾಹಿತ್ಯಿಕ ಆಧಾರಗಳಿಂದ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

ಮೈಕ್ರೋ ನ್ಯೂಸ್

## ಇಂದು ಹಂಪಿ ಬೈಸ್ಕೈ, ವಿವಿಧ ಸ್ಪರ್ಧೆ, ಧ್ವನಿ ಮತ್ತು ಬೆಳಕು ಕಾರ್ಯಕ್ರಮಗಳಿಗೆ ಚಾಲನೆ

■ ಹಂಪಿ ಟೈಮ್ಸ್ ಹೊಸಪೇಟೆ

ಹಂಪಿ ಉತ್ಸವದ ಅಂಗವಾಗಿ ಫೆ.28 ಶುಕ್ರವಾರದಂದು ವಿಶೇಷ ಕಾರ್ಯಕ್ರಮಗಳಿಗೆ ಚಾಲನೆ ದೊರೆಯಲಿದೆ. ಕಮಲಾಪುರದ ಹೋಟೆಲ್ ಮಯೂರ ಭುವನೇಶ್ವರಿ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ಹಂಪಿ ಬೈ ಸ್ಕೈ ಆರಂಭವಾಗಿಲಿದ್ದು, ಸಾರ್ವಜನಿಕರು ಆಗಸದಿಂದ ಹಂಪಿ ಸ್ಮಾರಗಳನ್ನು ವೀಕ್ಷಿಸಬಹುದು. ಹವಾಮಾ ಕಚೇರಿಯ ಹಿಂಭಾಗದ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ಎತ್ತುಗಳ ಪ್ರದರ್ಶನ ಏರ್ಪಡಿಸಲಾಗಿದೆ. ವಿರೂಪಾಕ್ಷೇಶ್ವರ ದೇವಸ್ಥಾನದ ಮುಂಭಾಗ ಬೆಳಿಗ್ಗೆ 10 ಕ್ಕೆ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿದೆ.

ಹಂಪಿಯ ಮಾತಂಗ ಪರ್ವತ ಮೈದಾನದ ಗ್ರಾಪಂ ಮುಂಭಾಗದಲ್ಲಿ ಬೆಳಿಗ್ಗೆ 10 ಕ್ಕೆ ಫಲ ಪುಷ್ಪ ಪ್ರದರ್ಶನ, ಸಾವಯವ ಮತ್ತು ಸಿರಿಧ್ಯಾನಗಳ ವಸ್ತು ಪ್ರದರ್ಶನ, ಸಿರಿಧಾನ್ಯಗಳ ಪಾಕಸ್ಪರ್ಧೆ, ವಿಜ್ಞಾನಿಗಳಿಂದ ಉಪನ್ಯಾಸ ಹಾಗೂ ಸಂವಾದ, ಪುಸ್ತಕ ಪ್ರದರ್ಶನ, ಚಿತ್ರಕಲಾ ಶಿಬಿರ, ಶಿಲ್ಪಕಲಾ ಶಿಬಿರ ಮತ್ತು ಚಿತ್ರಸಂತೆ, ಮತ್ಸ್ಯಮೇಳ, ಆಹಾರ ಮೇಳ ಪ್ರಾರಂಭವಾಗಲಿವೆ.

ಹಂಪಿಯ ಕುದುರೆ ಲಾಯ ಆವರಣ ಮತ್ತು ಆನೆಲಾಯ ಆವರಣದಲ್ಲಿ ಸಂಜೆ 06 ಗಂಟೆಗೆ ಧ್ವನಿ ಮತ್ತು ಬೆಳಕು ಪ್ರದರ್ಶನ ಏರ್ಪಡಿಸಲಾಗಿದೆ. ಈ ಪ್ರದರ್ಶನವು ಮಾರ್ಚ್ 6 ವರೆಗೆ ಮುಂದುವರೆಯಲಿದೆ.

## ವಸಂತ ವೈಭವಕ್ಕೆ ಮೆರಗು ತಂದ ಗಜಲಕ್ಷ್ಮಿ

ಮೊದಲ ಪುಟದಿಂದ

ತಮಟೆ, ಉರುಮೆ, ತುಷಾರಾಮ ಡೋಲು, ನಾಸಿಕ್ ಡೋಲು, ಹಗಲು ವೇಷ, ಸಿಂದೊಳ್ಳಿ, ಹಕ್ಕಿಪಿಕ್ಕಿ ಸೇರಿದಂತೆ ನೂರಕ್ಕೂ ಹೆಚ್ಚು ಜಾನಪದ ಕಲಾತಂಡಗಳು ಭಾಗವಹಿಸಿ ಉತ್ಸವಕ್ಕೆ ಮೆರಗು ತಂದವು.

ನಗರದ ವಡಕರಾಯ ದೇವಸ್ಥಾನದ ಮುಂಭಾಗದಿಂದ ಆರಂಭವಾದ ವಸಂತ ವೈಭವ ಮೆರವಣಿಗೆಯು ಮೂರಂಗಡಿ ಸರ್ಕಲ್, ಬಸ್ ಸ್ಟ್ಯಾಂಡ್ ರಸ್ತೆ, ಡಾ.ಬಿ.ಆರ್.ಅಂಬೇಡ್ಕರ್ ವೃತ್ತ ಮಾರ್ಗವಾಗಿ ನಗರದ ಜಿಲ್ಲಾ ಕ್ರೀಡಾಂಗಣದವರೆಗೆ ತಲುಪಿ ಸಂಪನ್ನಗೊಂಡಿತು.

## ಜಗದ್ಗುರುಗಳಿಂದ ವಿಶೇಷ ಶಿವ ಪೂಜೆ



ಹಂಪಿ ಟೈಮ್ಸ್ ಕೊಟ್ಟೂರು : ತಾಲೂಕಿನ ಉಜ್ಜಿನ ಸದ್ಧರ್ಮ ಪೀಠದಲ್ಲಿ ಮಹಾ ಶಿವರಾತ್ರಿಯ ಅಂಗವಾಗಿ, ಶ್ರೀ ಜಗ ದ್ಗುರು ಮಹಾ ಸನ್ನಿಧಿ ಯವರು ಶ್ರೀ ಜಗದ್ಗುರು ಮರುಳಸಿದ್ದೇಶ್ವರ ಸ್ವಾಮಿಯ ಲಿಂಗಕ್ಕೆ, ಮಹಾ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಸೇರಿದಂತೆ ಪೂಜಾ ಕೈಂಕಾರ್ಯಗಳನ್ನು ನೆರವೇರಿಸಿದರು.

ಕವಿ ಮನಸು

### ಸಾಗಿದೆ ಪಯಣ ಮತ್ತೇಲ್ಲಿಗೋ

ನಾವು ಪ್ರಗತಿಯಲ್ಲಿದ್ದೇವೆ ಹೇಳುತ್ತೇವೆ
ದುಡಿಯದೆ ದುಡ್ಡು ಬೇಕೆನ್ನುತ್ತೇವೆ
ಪುಕ್ಕಟೆ ಸಿಕ್ಕರೆ ಮುಗಿಲಿಗೆ ಹಾರುತ್ತೇವೆ
ಸಾಗಿದೆ ಪಯಣ ಮತ್ತೇಲ್ಲಿಗೋ।

ಸಾಲ ಸಿಕ್ಕರೆ ಮೊದಲಿಗರು ನಾವಾಗುತ್ತೇವೆ
ಸಾಲ ತೀರಿಸೆಂದರೆ ಹಿಂದೆ ಸರಿಯುತ್ತೇವೆ
ಬೇವರು ಸುರಿಸದೆ ಸಂಪತ್ತು
ಬೇಕೆನ್ನುವೆವು
ಸಾಗಿದೆ ಪಯಣ ಮತ್ತೇಲ್ಲಿಗೋ।

ನಾವು ನಮ್ಮವರನ್ನೆ ತೆಗಳುವೆವು
ಸ್ವಾರ್ಥ ಲಾಲಸೆಗೆ ಬಲಿಯಾಗುವೆವು
ಬಂಧು ಬಳಗ ದೂರ ಮಾಡುವೆವು
ಸಾಗಿದೆ ಪಯಣ ಮತ್ತೇಲ್ಲಿಗೋ।

ಅಧಿಕಾರ ಬೇಕು ಓಡೇ ಓಡುವೆವು
ಅಧಿಕಾರ ಸಿಕ್ಕಾಗ ಜನರನ್ನು
ಮರೆಯುವೆವು
ಹಣ ಅಂತಸ್ತಿಗಾಗಿ ಅಡ್ಡ ದಾರಿ
ಹಿಡಿಯುವೆವು
ಸಾಗಿದೆ ಪಯಣ ಮತ್ತೇಲ್ಲಿಗೋ।

– ಚಂದ್ರಶೇಖರಯ್ಯ ರೋಣದಮಠ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 22 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ವಿಜ್ಞಾನ

### ರಸಾಯನ ವಿಜ್ಞಾನ [ಪುನರಾವರ್ತನೆ]

**1. ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳು ಅಥವಾ ರೆಡಾಕ್ಸ್ ಕ್ರಿಯೆಗಳು ಎಂದರೇನು ?**

ಉ : ಕ್ರಿಯೆಯಲ್ಲಿ ಒಂದು ಪ್ರತಿವರ್ತಕವು ಉತ್ಕರ್ಷಣಗೊಂಡು ಮತ್ತೊಂದು ಪ್ರತಿವರ್ತಕವು ಅಪಕರ್ಷಣಗೊಂಡರೆ ಅಂತಹ ಕ್ರಿಯೆಗಳನ್ನು ಉತ್ಕರ್ಷಣ–ಅಪಕರ್ಷಣ ಕ್ರಿಯೆಗಳು ಅಥವಾ ರೆಡಾಕ್ಸ್ ಕ್ರಿಯೆಗಳು ಎನ್ನುವರು.

ಉದಾ–




**2. ಕಮಟುವಿಕೆ ಎಂದರೇನು ? ಕಮಟುವಿಕೆಯನ್ನು ತಡೆಗಟ್ಟುವ ವಿಧಾನಗಳನ್ನು ಬರೆಯಿರಿ ?**

ಉ : ಕೊಬ್ಬು ಮತ್ತು ಎಣ್ಣೆಯಿಂದ ತಯಾರಿಸಿದ ಪದಾರ್ಥಗಳು ಗಾಳಿಯೊಂದಿಗೆ ಉತ್ಕರ್ಷಣಗೊಂಡಾಗ ಅವುಗಳ ವಾಸನೆ ಮತ್ತು ರುಚಿ ಬದಲಾಗುತ್ತದೆ. ಇದನ್ನು ಕಮಟುವಿಕೆ ಎನ್ನುವರು.

ಕಮಟುವಿಕೆಯನ್ನು ತಡೆಗಟ್ಟುವ ವಿಧಾನಗಳು :

* ಆಹಾರ ಪದಾರ್ಥಗಳಿಗೆ ಪ್ರತಿ ಉತ್ಕರ್ಷಕಗಳನ್ನು ಸೇರಿಸುವುದು.
* ಆಹಾರ ಪದಾರ್ಥಗಳನ್ನು ಗಾಳಿ ಪ್ರವೇಶಿಸದ ಸಂಗ್ರಾಹಕಗಳಲ್ಲಿ ಸಂಗ್ರಹಿಸುವುದು.
* ಚಿಪ್ಸ್ ತಯಾರಕರು ಚಿಪ್ಸ್ ಉತ್ಕರ್ಷಣಗೊಳ್ಳುವುದನ್ನು ತಡೆಗಟ್ಟಲು, ಚಿಪ್ಸ್‌ನ ಪೊಟ್ಟಣದಲ್ಲಿ ನೈಟ್ರೋಜನ್ ಅನಿಲವನ್ನು ತುಂಬಿರುತ್ತಾರೆ.

**3. ಈ ಕೆಳಗಿನ ರಾಸಾಯನಿಕ ಸಮೀಕರಣಗಳನ್ನು ಸರಿದೂಗಿಸಿ ಬರೆಯಿರಿ ?**

1. $Pb(NO_3)_2 \rightarrow PbO + NO_2 + O_2$
2. $BaCl_2(aq) + Na_2SO_4(aq) \rightarrow BaSO_4(s) + NaCl(aq)$
3. $Na + H_2O \rightarrow NaOH + H_2$ + ಉಷ್ಣ

ಉ : 1. $2Pb(NO_3)_2 \rightarrow 2PbO + 4NO_2 + O_2$

2. $BaCl_2(aq) + Na_2SO_4(aq) \rightarrow BaSO_4(s) + 2NaCl(aq)$

3. $2Na + 2H_2O \rightarrow 2NaOH + H_2$ + ಉಷ್ಣ

**4. ಈ ಕೆಳಗಿನ ರಾಸಾಯನಿಕ ಕ್ರಿಯೆಯ ವಿಧವನ್ನು ಹೆಸರಿಸಿ ? ಈ ಕ್ರಿಯೆಯನ್ನು ಯಾವ ಕ್ಷೇತ್ರದಲ್ಲಿ ಬಳಸಿಕೊಳ್ಳುತ್ತಾರೆ ?** $2AgBr \xrightarrow{\text{ಸೂರ್ಯನಬೆಳಕು}} 2Ag + Br_2$

ಉ : ಇದು ದ್ಯುತಿ ವಿಭಜನ ಕ್ರಿಯೆಯಾಗಿದೆ.

ಈ ಕ್ರಿಯೆಯನ್ನು ಕಪ್ಪು ಬಿಳುಪು ಛಾಯಾಗ್ರಹಣದಲ್ಲಿ ಬಳಸುತ್ತಾರೆ.

**5. ನೀರಿನ ವಿದ್ಯುತ್ ವಿಭಜನ ಕ್ರಿಯೆಯಲ್ಲಿ ಕ್ಯಾಥೋಡ್ ಮತ್ತು ಆ್ಯನೋಡ್ ಗಳಲ್ಲಿ ಸಂಗ್ರಹವಾಗುವ ಅನಿಲಗಳು ಯಾವುವು ? ಅವುಗಳ ಅನುಪಾತವನ್ನು ಬರೆಯಿರಿ ?**

ಉ : ಆ್ಯನೋಡ್‌ನಲ್ಲಿ ಆಕ್ಸಿಜನ್ ಮತ್ತು ಕ್ಯಾಥೋಡ್‌ನಲ್ಲಿ ಹೈಡ್ರೋಜನ್ ಸಂಗ್ರಹವಾಗುತ್ತವೆ.

ಅನಿಲಗಳ ಅನುಪಾತ 2:1

**6. ಆಮ್ಲೀಯ ಮತ್ತು ಪ್ರತ್ಯಾಮ್ಲೀಯ ಸ್ವಭಾವಗಳಿಗೆ ಕಾರಣವಾದ ಅಯಾನುಗಳನ್ನು ಹೆಸರಿಸಿ. ಅಥವಾ ಆಮ್ಲ ಮತ್ತು ಪ್ರತ್ಯಾಮ್ಲಗಳಲ್ಲಿರುವ ಅಯಾನುಗಳನ್ನು ಹೆಸರಿಸಿ**

ಉ : • ಆಮ್ಲ – $H^+ / H_3O^+$ (ಹೈಡೋಜನ್/ಹೈಡ್ರೋನಿಯಂ) ಅಯಾನುಗಳು

• ಪ್ರತ್ಯಾಮ್ಲ – $OH^-$ (ಹೈಡ್ರಾಕ್ಸಿಲ್) ಅಯಾನುಗಳು

**7. ಈ ಕೆಳಗಿನ ಸಂಯುಕ್ತಗಳ (ಲವಣಗಳ) ಅಣು ಸೂತ್ರ, ರಾಸಾಯನಿಕ ಹೆಸರುಗಳನ್ನು ಬರೆದು ಪ್ರತಿಯೊಂದರ ಉಪಯೋಗಗಳನ್ನು ತಿಳಿಸಿ.**
**ಅ) ಚಲುವೆ ಪುಡಿ / ಬ್ಲೀಚಿಂಗ್ ಪುಡಿ ಆ) ಪ್ಲಾಸ್ಟರ್ ಆಫ್ ಪ್ಯಾರಿಸ್**
**ಇ). ವಾಷಿಂಗ್ ಸೋಡಾ**

ಉ : ಅ). ಚಲುವೆ ಪುಡಿ / ಬ್ಲೀಚಿಂಗ್ ಪುಡಿ :

ಅಣು ಸೂತ್ರ – $CaOCl_2$ ರಾಸಾಯನಿಕ ಹೆಸರು –ಕ್ಯಾಲ್ಸಿಯಂ ಆಕ್ಸಿ ಕ್ಲೋರೈಡ್

ಉಪಯೋಗಗಳು:– * ಲಾಂಡ್ರಿಯಲ್ಲಿ ತೊಳೆದ ಬಟ್ಟೆಗೆ ಬಿಳುಪು ನೀಡಲು,
* ರಾಸಾಯನಿಕ ಕಾರ್ಖಾನೆಗಳಲ್ಲಿ ಉತ್ಕರ್ಷಣಕಾರಿ ಆಗಿ,
* ಕುಡಿಯುವ ನೀರನ್ನು ಕ್ರಿಮಿ ಮುಕ್ತಗೊಳಿಸಲು ಉಪಯೋಗಿಸುತ್ತಾರೆ.

ಆ). ಪ್ಲಾಸ್ಟರ್ ಆಫ್ ಪ್ಯಾರಿಸ್ :

ಅಣು ಸೂತ್ರ – $CaSO_4 . \frac{1}{2} H_2O$

ರಾಸಾಯನಿಕ ಹೆಸರು – ಕ್ಯಾಲ್ಸಿಯಂ ಸಲ್ಫೈಟ್ ಹೆಮಿ ಹೈಡ್ರೇಟ್

ಉಪಯೋಗಗಳು:– * ಮುರಿದ ಮೂಳೆಗಳಿಗೆ ಸರಿಯಾದ ಸ್ಥಳದಲ್ಲಿ ಆಧಾರ ನೀಡಲು,
* ಆಟಿಕೆಗಳ ತಯಾರಿಕೆ, ಅಲಂಕಾರಿಕ ವಸ್ತುಗಳಲ್ಲಿ
* ನುಣುಪಾದ ಮೇಲ್ಮೈ ನಿರ್ಮಿಸಲು ಉಪಯೋಗಿಸುತ್ತಾರೆ.

ಇ). ವಾಷಿಂಗ್ ಸೋಡಾ :

ಅಣು ಸೂತ್ರ – $Na_2CO_3 . 10H_2O$

ರಾಸಾಯನಿಕ ಹೆಸರು –ಸೋಡಿಯಂ ಕಾರ್ಬೋನೇಟ್

ಉಪಯೋಗಗಳು:– * ನೀರಿನ ಶಾಶ್ವತ ಗಡಸುತನವನ್ನು ನಿವಾರಿಸಲು,
* ಗಾಜು, ಸಾಬೂನು, ಕಾಗದ ಮತ್ತು ಬೋರಾಕ್ಸ್ ಉತ್ಪಾದನೆಯಲ್ಲಿ,
* ಗೃಹಬಳಕೆಯ ಸ್ವಚ್ಛಕಾರಿಯಾಗಿ ಉಪಯೋಗಿಸುತ್ತಾರೆ.

**8. ಕ್ಲೋರೋ ಆಲ್ಕಲಿ ಪ್ರಕ್ರಿಯೆಯ 3 ಉತ್ಪನ್ನಗಳನ್ನು ಹೆಸರಿಸಿ, ಪ್ರತಿಯೊಂದರ ಉಪಯೋಗಗಳನ್ನು ಬರೆಯಿರಿ.**

ಉ : ಕ್ಲೋರ್ ಆಲ್ಕಲಿ ಪ್ರಕ್ರಿಯೆಯ 3 ಉತ್ಪನ್ನಗಳು–

1. ಹೈಡ್ರೋಜನ್ 2. ಕ್ಲೋರಿನ್ 3. ಸೋಡಿಯಂ ಹೈಡ್ರಾಕ್ಸೈಡ್ ಒಳಗೊಂಡಿರುವ ಬ್ರೈನ್.

ಹೈಡ್ರೋಜನ್ ಉಪಯೋಗಗಳು:– ಇಂಧನವಾಗಿ, ಕೃತಕ ಬೆಣ್ಣೆ ತಯಾರಿಕೆಯಲ್ಲಿ , ರಸಗೊಬ್ಬರಗಳಿಗೆ ಅಮೋನಿಯ ತಯಾರಿಕೆಯಲ್ಲಿ,

ಕ್ಲೋರಿನ್‌ನ ಉಪಯೋಗಗಳು:– ನೀರಿನ ಶುದ್ಧೀಕರಣದಲ್ಲಿ, ಈಜುಕೊಳಗಳ ಸ್ವಚ್ಛಕಾರಕವಾಗಿ, ಸೋಂಕು ನಾಶಕವಾಗಿ ಮತ್ತು ಕೀಟನಾಶಕವಾಗಿ,

ಸೋಡಿಯಂ ಹೈಡ್ರಾಕ್ಸೈಡ್ ಒಳಗೊಂಡಿರುವ ಬ್ರೈನ್ ಉಪಯೋಗಗಳು:– ಲೋಹಗಳ ಜಿಡ್ಡು ನಿವಾರಣೆ, ಸಾಬೂನು ಮತ್ತು ಮಾರ್ಜಕಗಳು, ಕಾಗದ ತಯಾರಿಕೆ, ಕೃತಕ ನೂರುಗಳ ತಯಾರಿಕೆ.

**9. ತಟಸ್ಥೀಕರಣ ಕ್ರಿಯೆ ಎಂದರೇನು? ಒಂದು ಉದಾಹರಣೆ ಕೊಡಿ.**

ಉ : ಆಮ್ಲ ಮತ್ತು ಪ್ರತ್ಯಾಮ್ಲಗಳ ನಡುವಿನ ಕ್ರಿಯೆಯಿಂದ ಲವಣ ಮತ್ತು ನೀರು ಉಂಟಾಗುವುದನ್ನು ತಟಸ್ಥೀಕರಣ ಕ್ರಿಯೆ ಎನ್ನುವರು.

ಉದಾ: ಪ್ರತ್ಯಾಮ್ಲ + ಆಮ್ಲ → ಲವಣ ಮತ್ತು ನೀರು

$$NaOH + HCl \rightarrow NaCl + H_2O$$

**10. ಹಲ್ಲಿನ ಸವೆತ ಉಂಟಾಗಲು ಕಾರಣವೇನು? ಇದನ್ನು ಹೇಗೆ ತಡೆಗಟ್ಟಬಹುದು?**

ಉ : ಆಹಾರ ಸೇವನೆಯ ನಂತರ ಬಾಯಿಯಲ್ಲಿ ಉಳಿದ ಸಕ್ಕರೆ ಮತ್ತು ಆಹಾರದ ಕಣಗಳ ವಿಘಟನೆಯಿಂದ ಬಾಯಿಯಲ್ಲಿರುವ ಬ್ಯಾಕ್ಟೀರಿಯಾಗಳು ಆಮ್ಲಗಳನ್ನು ಉತ್ಪತ್ತಿ ಮಾಡುತ್ತವೆ. ಇದರಿಂದ ಬಾಯಿಯ pH 5.5 ಕ್ಕಿಂತ ಕಡಿಮೆಯಾಗಿ ಹಲ್ಲಿನ ಸವೆತ ಉಂಟಾಗುತ್ತದೆ.

ತಡೆಗಟ್ಟುವ ವಿಧಾನ : ಆಹಾರ ಸೇವನೆಯ ನಂತರ ಬಾಯಿಯನ್ನು ಸ್ವಚ್ಛಗೊಳಿಸುವುದು. ಹಲ್ಲುಗಳನ್ನು ಸ್ವಚ್ಛಗೊಳಿಸಲು ಪ್ರತ್ಯಾಮ್ಲೀಯವಾಗಿರುವ ಟೂತ್ ಪೇಸ್ಟ್‌ಗಳನ್ನು ಬಳಸುವುದು.

**11. ದೈನಂದಿನ ಜೀವನದಲ್ಲಿ pH ಮೌಲ್ಯದ ಪ್ರಾಮುಖ್ಯತೆಯನ್ನು ತಿಳಿಸಿ**

ಉ : 1. ಸಸ್ಯ ಮತ್ತು ಪ್ರಾಣಿಗಳು 7.0 ಇಂದ 7.8 pH ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತವೆ.

2. ಮಳೆ ನೀರಿನ pH ಮೌಲ್ಯ 5.6 ಕ್ಕಿಂತ ಕಡಿಮೆಯಾದಾಗ ಅದನ್ನು ಆಮ್ಲ ಮಳೆ ಎನ್ನುತ್ತಾರೆ.

3. ಸಸ್ಯಗಳ ಆರೋಗ್ಯಕರ ಬೆಳವಣಿಗೆಗೆ ನಿರ್ದಿಷ್ಟ pH ವ್ಯಾಪ್ತಿಯ ಅಗತ್ಯವಿದೆ.

4. ಜೀರ್ಣಕ್ರಿಯೆಯಲ್ಲಿ pH ಪ್ರಮಾಣ ಅತಿ ಕಡಿಮೆಯಾದರೆ ಆಮ್ಲೀಯತೆ ಅಥವಾ ಅಸಿಡಿಟಿ ಉಂಟಾಗುತ್ತದೆ.

5. pH ಪ್ರಮಾಣ 5.6 ಕ್ಕಿಂತ ಕಡಿಮೆಯಾದಾಗ ಹಲ್ಲಿನ ಸವೆತ ಉಂಟಾಗುತ್ತದೆ.

**12. ಆಮ್ಲವನ್ನು ಸಾರರಿಕ್ತಗೊಳಿಸುವಾಗ ಆಮ್ಲವನ್ನು ನೀರಿಗೆ ಸೇರಿಸಬೇಕು. ವೈಜ್ಞಾನಿಕ ಕಾರಣ ಕೊಡಿ.**

ಉ : ನೀರನ್ನು ಸಾರೀಕೃತ ಆಮ್ಲಕ್ಕೆ ಸೇರಿಸಿದರೆ ಉತ್ಪತ್ತಿಯಾಗುವ ಉಷ್ಣವು ಮಿಶ್ರಣ ಹೊರಸಿಡಿಯುವಂತೆ ಮಾಡಬಹುದು ಮತ್ತು ಸುಟ್ಟ ಗಾಯಗಳು ಉಂಟಾಗಬಹುದು. ಅತಿಯಾದ ಬಿಸಿಯಾಗುವಿಕೆಯಿಂದ ಗಾಜಿನ ಸಂಗ್ರಾಹಕವೂ ಒಡೆಯಬಹುದು.

**Never give up, Try Try Try...**

ಮುಂದುವರೆಯುತ್ತದೆ.........

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಶಿವತನಯ ಎಸ್.ಸಿ.. ವಿಜ್ಞಾನ ಶಿಕ್ಷಕರು, ಎಸ್.ಜಿ.ಬಿ.ಪ್ರೌಢಶಾಲೆ, ಬೆಣಕಲ್ಲು, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ )

ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನಮಠ, ಹೊಸಪೇಟೆ

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಫಾಲ್ಗುಣ । ಸಂವತ್ಸರ: ಕ್ರೋಧಿ

**28–02–2025 – ಶುಕ್ರವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಧನಿಷ್ಠ |
| ಯೋಗ | : ಶಿವ |
| ಕರಣ | : ಶಕುನಿ |
| ಸೂರ್ಯೋದಯ | : 06:50:36 |
| ಸೂರ್ಯಾಸ್ತ | : 18:28:29 |
| ರಾಹು ಕಾಲ | : 11:12–12:40 |
| ಯಮಘಂಡ ಕಾಲ | : 15:34–17:01 |
| ಗುಳಿಕ ಕಾಲ | : 08:18–09:45 |



## ತುಂಗಭದ್ರಾ ನೀರಿನ ಮಟ್ಟ

ಗುರುವಾರ : 27–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1607.98 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7378 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 33.763 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1587.02 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 934 ಕ್ಯುಸೆಕ್ |
| ಸಾಮರ್ಥ್ಯ | 8.716 ಟಿಎಂಸಿ |



### ಹಂಪಿ ಉತ್ಸವ–2025 ಕಮಲಾಪುರ ಕೆರೆಯಲ್ಲಿ ದೋಣಿ ವಿಹಾರಕ್ಕೆ ಚಾಲನೆ

# ಕಮಲಾಪುರ ಕೆರೆಯಲ್ಲಿ ಬೋಟಿಂಗ್




**ದೋಣಿವಿಹಾರ ದರ:** ಮುರುಡೇಶ್ವರ ಹಾಗೂ ಗೋಕರ್ಣದಲ್ಲಿ ಜಲಸಾಹಸ ಕ್ರೀಡೆಗಳನ್ನು ಆಯೋಜಿಸಿ, ಪ್ರವಾಸಿಗರ ಮೆಚ್ಚುಗೆ ಗಳಿಸಿರುವ ಅಕ್ವಾ ರೈಡ್ ಖಾಸಗಿ ಕಂಪನಿ, ಕಮಲಾಪುರ ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆ ಕಲ್ಪಿಸಿದೆ. ನುರಿತ 15 ಜನರ ತಂಡ ಸ್ಥಳದಲ್ಲೇ ಬೀಡು ಬಿಟ್ಟಿದ್ದಾರೆ. 8 ಆಸನಗಳ 2 ಸ್ಪೀಡ್ ಬೋಟ್, 6 ಆಸನಗಳ 1 ಸ್ಪೀಡ್ ಬೋಟ್, 1 ಜಟ್‌ಸ್ಕೀ ಸ್ಕೂಟರ್ ಕಾರ್ಯಾಚರಣೆ ನಡೆಸುತ್ತಿವೆ. ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಲೈಫ್ ಜಾಕೆಟ್‌ಗಳನ್ನು ಬಳಸಲಾಗುತ್ತಿದೆ. ಸ್ಪೀಡ್ ಬೋಟಿಂಗ್ ಸವಾರಿಗೆ ಪ್ರತಿ ಓರ್ವ ವ್ಯಕ್ತಿಗೆ ರೂ.100 ದರ, ಜಟ್‌ಸ್ಕೀ ಸ್ಕೂಟರ್ ಸವಾರಿಗೆ ರೂ.300 ದರ ನಿಗದಿ ಮಾಡಲಾಗಿದೆ ಎಂದು ಅಕ್ವಾ ರೈಡ್ ಕಂಪನಿ ನಿಷ್ಚಿತ್ ಮಾಹಿತಿ ನೀಡಿದರು.

■ **ಹಂಪಿ ಟೈಮ್ಸ್ ಹೊಸಪೇಟೆ**

ಐತಿಹಾಸಿಕ ಹಂಪಿಗೆ ಭೇಟಿ ನೀಡುವ ಪ್ರವಾಸಿಗರು ಉತ್ಸವದ 3 ದಿನಗಳ ಕಾಲ ಕಮಲಾಪುರ ಕೆರೆಯಲ್ಲಿ ಬೋಟಿಂಗ್ ಪ್ರಯಾಣದ ಆನಂದ ಪಡೆಯಬಹುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಬಿ.ಜಡ್.ಜಮೀರ್ ಅಹ್ಮದ್ ಖಾನ್ ಹೇಳಿದರು.

ಹಂಪಿ ಉತ್ಸವದಂಗವಾಗಿ ಕಮಲಾಪುರ ಕೆರೆಯಲ್ಲಿ ದೋಣಿ ವಿಹಾರಕ್ಕೆ ಗುರುವಾರ ಚಾಲನೆ ನೀಡಿ ಮಾತನಾಡಿದರು. ಅಧಿಕಾರಿಗಳೊಂದಿಗೆ ಮೋಟಾರ್ ಬೋಟ್‌ನಲ್ಲಿ ಕುಳಿತು ಕಮಲಾಪುರ ಕೆರೆಯ ಸೌಂದರ್ಯ ಆಸ್ವಾದಿಸಿದರು. ಸ್ವತಃ ಜಟ್‌ಸ್ಕೀ ಸ್ಕೂಟರ್ ಚಲಾಯಿಸಿ ಜಲಕ್ರೀಡೆ ಸಾಹಸ ಮೆರೆದರು. ಕಮಲಾಪುರ ಕೆರೆಯ ಕೆನ್ನೀರಿನಲ್ಲಿ ಬೋಟಿಂಗ್ ನಡೆಸು ವುದು ಮತ್ತು ವಿಹಾರದ ವಿಶಿಷ್ಟ ಅನುಭವ ತಮ್ಮದಾಗಿಸಿಕೊಳ್ಳಬಹದು ಎಂದರು

ದೋಣಿ ವಿಹಾರ ಚಾಲನೆಯ ವೇಳೆ ಶಾಸಕ ಹೆಚ್.ಆರ್.ಗವಿಯಪ್ಪ, ಮಾಜಿ ಶಾಸಕ ಸಿರಾಜ್ ಶೇಖ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿಬಾಬು ಬಿ.ಎಲ್, ಸಹಾಯಕ ಆಯುಕ್ತ ವಿವೇಕ್, ತಹಶೀಲ್ದಾರ್ ಶೃತಿ ಎಂ. ಗೌಡ, ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಮಲ್ಲೇಶ್ ಇತರರು ಉಪಸ್ಥಿತರಿದ್ದರು. ದೋಣಿ ವಿಹಾರ ತೆರಳಿ ಪ್ರಕೃತಿಯ ಸೌಂದರ್ಯವನ್ನು ಸವಿದು ಖುಷಿಪಟ್ಟರು.

# ಇಂದು ಸಂಜೆ 6ಕ್ಕೆ ಹಂಪಿ ಉತ್ಸವ ಉದ್ಘಾಟನೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಇಲಾಖೆ ಹಾಗೂ ವಿಜಯನಗರ ಜಿಲ್ಲಾಡಳಿತದ ಸಹಯೋಗದಲ್ಲಿ ಆಯೋಜಿಸ ಲಾಗುತ್ತಿರುವ ಮೂರು ದಿನಗಳ ಹಂಪಿ ಉತ್ಸವ–2025ಕ್ಕೆ ಫೆ.28 ಶುಕ್ರವಾರ ಸಂಜೆ 6 ಗಂಟೆಗೆ ಗಾಯತ್ರಿ ಪೀಠದ ಬಳಿ ನಿರ್ಮಿಸಲಾಗಿರುವ ಎಂ.ಪಿ. ಪ್ರಕಾಶ್ ಪ್ರಧಾನ ವೇದಿಕೆಯಲ್ಲಿ ಚಾಲನೆ ದೊರೆಯಲಿದೆ. ಸಿಎಂ ಸಿದ್ದರಾಮಯ್ಯ ಉದ್ಘಾಟಿಸುವರು. ಡಿಸಿಎಂ ಡಿ.ಕೆ.ಶಿವಕುಮಾರ್ ಉಪಸ್ಥಿತರಿರುವರು.



ಜಿಲ್ಲಾ ಉಸ್ತುವಾರಿ ಸಚಿವ ಬಿ. ಜೆಡ್.ಜಮೀರ್ ಅಹ್ಮದ್ ಖಾನ್, ಪ್ರವಾಸೋದ್ಯಮ ಇಲಾಖೆ ಸಚಿವ ಹೆಚ್. ಕೆ.ಪಾಟೀಲ್, ಸಾರಿಗೆ ಮತ್ತು ಮುಜುರಾಯಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ತಂಗಡಗಿ ಶಿವರಾಜ್ ಸಂಗಪ್ಪ ಹಾಗೂ ಇತರರು ಗೌರವ ಉಪಸ್ಥಿತರಿರುವರು.

ಶಾಸಕ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸುವರು. ಗಣ್ಯ ಅತಿಥಿಗಳಾಗಿ ಸಂಸದರಾದ ಈ.ತುಕಾರಾಮ್ ಹಾಗೂ ಡಾ.ಪ್ರಭಾ ಮಲ್ಲಿಕಾರ್ಜುನ, ಗೌರವ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಪಾಲ್ಗೊಳ್ಳುವರು.

ಶಾಸಕರಾದ ಕೆ.ನೇಮಿರಾಜ ನಾಯ್ಕ, ಎನ್.ಟಿ.ಶ್ರೀನಿವಾಸ, ಕೃಷ್ಣನಾಯ್ಕ, ಲತಾ ಮಲ್ಲಿಕಾರ್ಜುನ, ಬಿ.ದೇವೇಂದ್ರಪ್ಪ, ವಿಧಾನಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಕಮಲಾಪುರ ಅಧ್ಯಕ್ಷರಾದ ಅಮೀನಾಭೀ, ಹಂಪಿ ಗ್ರಾಪಂ ಅಧ್ಯಕ್ಷರಾದ ರಜನಿ ಷಣ್ಮುಖ ಗೌಡ ಸೇರಿದಂತೆ ಇತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ವಸತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಹಾಗೂ ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ.ಎನ್. ಮಂಜುಳಾ, ಪ್ರವಾಸೋದ್ಯಮದ ಸರ್ಕಾರದ ಕಾರ್ಯದರ್ಶಿ ಸಲ್ಮಾ ಕೆ.ಫಾಹಿಮ್, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕ ಡಾ.ರಾಜೇಂದ್ರ ಕೆ.ವಿ., ಕಲಬುರಗಿಯ ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತ ಕೃಷ್ಣಬಾಜಪೇಯಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಡಾ.ಕೆ.ಧರಣಿದೇವಿ ಸೇರಿದಂತೆ ಇತರರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ಹಂಪಿ ಹೇಮಕೂಟದ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾಸ್ವಾಮಿಗಳು, ಹಂಪಿ ಕ್ಷೇತ್ರದ ವಿರೂಪಾಕ್ಷೇಶ್ವರ ವಿದ್ಯಾರಣ್ಯ ಮಠದ ವಿದ್ಯಾರಣ್ಯ ಭಾರತಿ ಸ್ವಾಮಿಗಳು ಹಂಪಿ ಗಾಯತ್ರಿ ಪೀಠದ ದಯಾನಂದಪುರಿ ಮಹಾಸ್ವಾಮಿಗಳು ಗೌರವ ಆಹ್ವಾನಿತರಾಗಿ ಭಾಗವಹಿಸುವರು. ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಬಿ.ಎಲ್., ಜಿಪಂ ಸಿಇಒ ನೊಂಗ್ಜಾಯ್ ಮೊಹಮ್ಮದ್ ಅಲಿ ಅಕ್ರಮ್ ಷಾ ಸೇರಿದಂತೆ ವಿಜಯನಗರ ಜಿಲ್ಲೆಯ ಎಲ್ಲಾ ಚುನಾಯಿತ ಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿರುವರು.








